ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ: 91/2025</u>**

ಪ್ರ.ವ.ಬೋ.ತಾಃ 14-01-2026

ಚಾಸಾಃ 3 ಪ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಮಂಜುಶ್ರೀ |
| ಗಂಡನ ಹೆಸರು | ನವೀನ್ ಕುಮಾರ್ |
| ವಯಸ್ಸು | 30 ವರ್ಷ |
| ವೃತ್ತಿ | ಗೃಹಿಣಿ |
| ವಾಸ | ಮಲ್ಲಪ್ಪನಹಳ್ಳಿ, ಶಿರಾ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ಆರೋಪಿ ಗೊತ್ತು. ಚಾಸಾ.1 ನನ್ನ ತಾಯಿ, ಚಾಸಾ.2 ನನ್ನ ತಂದೆ. ನಾನು ಮದುವೆ ಆದ ನಂತರ ನನ್ನ ಗಂಡನ ಊರಾದ ಲಿಂಗೇನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ದಿಃ 02.06.2025 ರಂದು ಬೆಳಗ್ಗೆ 11.40 ಗಂಟೆ ಸಮಯದಲ್ಲಿ ನಾನು ನನ್ನ ತಂದೆಯವರ ತೋಟದ ಮನೆಯ ಪಕ್ಕದಲ್ಲಿ ಬಟ್ಟೆಯನ್ನು ಒಗೆದು ಒಣಹಾಕುತ್ತಿರುವಾಗ ನನ್ನ ತಾಯಿ ಕಿರುಚಿಕೊಂಡರು, ತಕ್ಷಣ ನಾನು ನನ್ನ ತಾಯಿಯ ಬಳಿ ಬಂದು ನೋಡಲಾಗಿ ಒಬ್ಬ ವ್ಯಕ್ತಿ ನನ್ನ ತಾಯಿಯ ಕಣ್ಣಿಗೆ ಖಾರದ ಪುಡಿಯನ್ನು ಎರಚಿ ಅವರ ಕೊರಳಿನಲ್ಲಿದ್ದ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟುಹೋದರು. ಆನಂತರ ನಾನು ನನ್ನ ತಾಯಿಯನ್ನು ಬಚ್ಚಲು ಮನೆಗೆ

ಕರೆದುಕೊಂಡು ಹೋಗಿ ಮುಖ ತೊಳೆದು, ಈ ವಿಚಾರವನ್ನು ಚಾಸಾ.2 ರವರಿಗೆ ಫೋನ್ ಮೂಲಕ ತಿಳಿಸಿದೆನು. ನಂತರ ಚಾಸಾ.2 ರವರು ಮನೆಗೆ ಬಂದು ಚಾಸಾ.1 ರವರನ್ನು ಕರೆದುಕೊಂಡು ಬಸವನಹಳ್ಳಿ, ಜಡೆಗೊಂಡನಹಳ್ಳಿ, ಭಕ್ತರಹಳ್ಳಿ, ಗೋಪಕಾನಹಳ್ಳಿ ಗ್ರಾಮಗಳಲ್ಲಿ ಹುಡುಕಾಡಿದರು, ಆದರೆ ಯಾರೂ ಸಹ ಸಿಕ್ಕಿರುವುದಿಲ್ಲ. ನಂತರ ಅದೇ ದಿನ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ.

ಅದೇ ದಿನ ಸಂಜೆ 5.15 ಗಂಟೆ ಸಮಯಕ್ಕೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ.1 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ.4 ಮತ್ತು 5 ರವರ ಸಮಕ್ಷಮ ಸಂಜೆ 6.15 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ. ದಿಃ 03.06.2025 ರಂದು ಪೊಲೀಸರು ನನ್ನ ಮರು ಹೇಳಿಕೆ ಪಡೆದಿರುತ್ತಾರೆ. ದಿಃ 04.06.2025 ರಂದು ಮಧ್ಯಾಹ್ನ 1.30 ಗಂಟೆಗೆ ಪೊಲೀಸರು ಚಾಸಾ1 ರವರಿಗೆ ಸಂಬಂಧಪಟ್ಟ ಬಂಗಾರದ ಸರ, ಆರೋಪಿ ಮತ್ತು ಕೃತ್ಯಕ್ಕೆ ಬಳಸಿದ ವಾಹನವನ್ನು ಗುರುತಿಸುವಂತೆ ಹೇಳಿದ್ದು, ಅದೇ ದಿನ ಮಧ್ಯಾಹ್ನ 1.30 ಗಂಟೆಗೆ ಠಾಣೆಗೆ ಹೋಗಿ ಆರೋಪಿ, ಚಾಸಾ.1 ರವರಿಗೆ ಸಂಬಂಧಪಟ್ಟ ಬಂಗಾರದ ಮಾಂಗಲ್ಯ ಸರ ಮತ್ತು ಕೃತ್ಯಕ್ಕೆ ಬಳಸಿದ ಸಿಟಿ 100 ದ್ವಿಚಕ್ರ ವಾಹನವನ್ನು ತೋರಿಸಿದ್ದು, ಗುರುತಿಸಿರುತ್ತೇವೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ–**

ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ರೂ.200/–ರ ಖರ್ಚಿನ ಸಹಿತ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ